ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM.

5ನೇ ವರ್ಷ 23ನೇ ಸಂಚಿಕೆ ಕೊಪ್ಪ 22-2-1987 ಭಾನುವಾರ ಬೆಲೆ 50 ಪೈಸೆ

ಸಹಕಾರ ಸಂಘದ ಹಿತಕ್ಕಿಂತ ಹಣ ದುರುಪಯೋಗಪಡಿಸಿದ ಕಾರ್ಯದರ್ಶಿಯ ಹಿತವೇ ಮುಖ್ಯ!

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಈ ನಾಡಿನಲ್ಲಿ ಸಹಕಾರ ಸಂಘವೊಂದರ ಹಿತಕ್ಕಿಂತ ಅಲ್ಲಿ ಹಣ ದುರುಪಯೋಗ ಪಡಿಸಿಕೊಂಡ ಕಾರ್ಯದರ್ಶಿಯ ಹಿತ ಚಿಂತನೆಯೇ ಮುಖ್ಯವೆ?

ಇಂಥ ಅನುಮಾನವನ್ನು ಪುಷ್ಟೀಕರಿಸುವಂಥ ಪ್ರಕರಣವೊಂದು ಈ ತಾಲ್ಲೂಕಿನ ತೆಕ್ಕೂರಿನಲ್ಲಿರುವ ಬೆಟ್ಟಗೆರೆ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಡೆದಿರುವುದಾಗಿ ಅದರ ಅಧ್ಯಕ್ಷ ವಿ. ಎಲ್. ಸತೀಶ್ ತಿಳಿಸಿದ್ದಾರೆ.

ಈ ಸಂಘದಲ್ಲಿ ಟಿ. ಎಲ್. ಶ್ರೀನಿವಾಸ್ ಎಂಬವ ಕಾರ್ಯದರ್ಶಿಯಾಗಿದ್ದ. ಎಲ್ಲಾ 'ಅನುಭವಿ'ಗಳ ನಿರ್ದೇಶಕ ಮಂಡಳಿಯಿದ್ದಾಗ "ಎಲ್ಲವೂ" ಸುಸೂತ್ರವಾಗಿ ನಡೆಯಿತು. (ಗ್ರಾಹಕರ ಪಾಲಿಗಲ್ಲ, ಕಾರ್ಯದರ್ಶಿಯ ಮತ್ತು ಅವನ 'ಹೇಳುವವರು-ಕೇಳುವವರ' ಪಾಲಿಗೆ!)

ಆದರೆ 1985ರ ಜನವರಿಯಲ್ಲಿ ಸಂಘಕ್ಕೆ 'ಹುಡುಗಣ್ಣಗಳ' ಹೊಸ ಆಡಳಿತ ಮಂಡಳಿ ಬಂತು. ಬಂದವು ಸುಮ್ಮ ನಿರಬಾರ್ದಾ? ದೇಶ ಸರಿಮಾಡೋ ತಲೆ ಪ್ರತಿಷ್ಠೆ ಅವಕ್ಕೆ. ಸಂಘದ ಹಿಂದಿನ ವ್ಯವಹಾರಗಳ ಬಗ್ಗೆ ಮಾಹಿತಿ ಒದಗಿಸಲು ಕಾರ್ಯದರ್ಶಿಗೆ ಗಂಟು ಬೀಳುವುದಾ ?

ಕಾರ್ಯದರ್ಶಿ ಏನು ಅಷ್ಟು ಪುಟಗೋಸಿಯಾ? ಜಗ್ಗಲಿಲ್ಲ. ಸರಿ. ಅದಕ್ಷತೆ, ಅಸಾದರಣೆಗಾಗಿ ಆತನನ್ನು 6 8.85ರಂದು ಅಮಾನತು ಮಾಡಿತು ಆಡಳಿತ ಮಂಡಳಿ. ಅವನ ಮೇಲೆ ಕಾನೂನು ಕ್ರಮ ಕೈಗೊಳ್ಳಲೂ ಇಲಾಖೆಗೆ ಬರೆಯಿತು. ಆದರೆ ಕಾರ್ಯದರ್ಶಿಯನ್ನು ಅಷ್ಟು ಸಲೀಸಾಗಿ ಬಲಿಪಶು ಮಾಡಿದರೆ ಹೇಗೆ? ಅಂತೂ ಅಕ್ಟೋಬರಿನಲ್ಲಿ ಅವನನ್ನು ಅಮಾನತುಗೊಳಿಸದೇ ಬೇರೆ ಹುಲ್ಲುಗಾವಲಿಗೆ ಹೊಡೆಯಲಾಯಿತು

ಈ ಸಂಘಕ್ಕೆ ಪಕ್ಕದ ಹಾಲಂದೂರು ಸಂಘದ ಕಾರ್ಯದರ್ಶಿಯನ್ನು ಇನ್‌ಚಾರ್ಜ್ ಆಗಿ ನೇಮಿಸಲಾಯಿತು. ಅವರು 86ರ ಫೆಬ್ರವರಿಯಲ್ಲಿ ಆಡಳಿತ ಮಂಡಳಿಗೆ 1984-85ರ ಆಡಿಟ್ ವರದಿಯನ್ನು ತಿಳಿಸಿ, ಸಂಘದ ವ್ಯವಹಾರದ ಬಗ್ಗೆ ಸಹಕಾರಿ ಕಾಯಿದೆ

(4ನೇ ಪುಟಕ್ಕೆ)

ಶೃಂಗೇರಿ ಭೂಬ್ಯಾಂಕ್‌ನಲ್ಲಿ ಹಲವು ಯೋಜನೆಗಳ ನಿಲುಗಡೆ ?

ಶೃಂಗೇರಿ: ಇಲ್ಲಿನ ಪ್ರಾ. ಸ. ಕೃ. ಅ. ಬ್ಯಾಂಕ್ (ಭೂ ಅಭಿವೃದ್ಧಿ ಬ್ಯಾಂಕ್)ನಲ್ಲಿ ವಸೂಲಾತಿಯ ಕೊರತೆಯಿಂದ ಯೋಜನೆಗಳು ನಿಲ್ಲುವ ಮಟ್ಟಕ್ಕೆ ಬಂದಿದೆಯೇ ?

"ತಾತ್ಕಾಲಿಕವಾಗಿ ಮನೆ, ದನದ ಕೊಟ್ಟಿಗೆ ಮತ್ತು ತಂತಿ ಬೇಲಿ ಯೋಜನೆಗಳೂ, ಶಾಶ್ವತವಾಗಿ ಅಡಿಕೆ ತೋಟದ ರಿಪೇರಿ, ಗದ್ದೆ ರಿಪೇರಿ ಯೋಜನೆಗಳೂ ನಿಂತಿರುವುದನ್ನು ತಿಳಿಸಲು ವಿಷಾದಿಸುತ್ತೇವೆ" ಎನ್ನುತ್ತಾರೆ ಅದರ ಅಧ್ಯಕ್ಷ ಕೆ. ಎಂ. ಮಂಜುನಾಥ್.

ಹೀಗೆಂದು ಹೇಳಿ, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ವಸೂಲಿ ಸಾಧಿಸಲು ಸಹಕರಿಸಬೇಕೆಂಬುದು ಸದಸ್ಯರಲ್ಲಿ ಅವರ ಮನವಿ.

ಈ ಬ್ಯಾಂಕಿನ ಮೂಲಕ ಪಡೆದ ಆರ್ಥಿಕ ನೆರವಿಗೆ ನಿಯಿದೆ ತಾರೀಖಿನೊಳಗೆ ಮರುಪಾವತಿ ಮಾಡುವ ರೈತರಿಗೆ ಸರ್ಕಾರದಿಂದ ದೊರೆಯುವ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಸಕಾಲದಲ್ಲಿ ಮರುಪಾವತಿ ಮಾಡುವುದರಿಂದ ಬ್ಯಾಂಕಿನ ಆರ್ಥಿಕ ಸ್ಥಿತಿ ಉತ್ತಮಗೊಂಡು ಇದರಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ರೈತರಿಗೆ ಆರ್ಥಿಕ ಸಹಾಯ ಕಲ್ಪಿಸಲು ಸಾಧ್ಯವಾಗುತ್ತದೆ ಎನ್ನುವುದು ಒಟ್ಟನಲ್ಲಿ ಸದಸ್ಯರಲ್ಲಿ ಅವರ ವಿನಂತಿ. ಅಷ್ಟೇ.

ರಬ್ಬರು ಮಂಡಳಿ ತಜ್ಞರಿಂದ ಕೊಪ್ಪದಲ್ಲಿ ರೈತರ ಸಂಪರ್ಕ ಕಾರ್ಯಕ್ರಮ

ಕೊಪ್ಪ: ಮಂಗಳೂರಿನಲ್ಲಿರುವ ರಬ್ಬರು ಮಂಡಳಿಯ ಸಹಾಯಕ ನಿರ್ದೇಶಕರಾದ ಪಾಲ್ ಅವರು ಫೆ. 19ರಂದು ಕೊಪ್ಪದಲ್ಲಿ ಆಸಕ್ತ ರೈತರನ್ನು ಸಂಪರ್ಕಿಸಿ, ರಬ್ಬರ್ ಬೆಳೆಯ ಬಗ್ಗೆ ಮಾಹಿತಿಗಳನ್ನು ನೀಡಿದರು.

"ಮುಂಜಾವು", ಲಯನ್ಸ್ ಕ್ಲಬ್, ಕೃಷಿ ಇಲಾಖೆ ಮತ್ತು ಕೃಷಿ ವಿಚಾರ ವಿನಿಮಯ ಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಾಟಾಗಿತ್ತು. ಎಂ ಎಸ್. ಸುಬ್ಬಯ್ಯ ಗೌಡ ಸ್ವಾಗತಿಸಿ, ಎ.ಜಿ. ಸುಬ್ರಮಣ್ಯ ವಂದಿಸಿದರು.

ರಬ್ಬರನ್ನು ಕೇವಲ ಮಳೆಯ ಆಧಾರದಿಂದ ಖುಷ್ಕಿ ಮತ್ತು ಪಾಳು ಭೂಮಿಗಳಲ್ಲಿ ಸಹ ಬೆಳೆಯಬಹುದಾಗಿದ್ದು, ಮಂಡಳಿಯಿಂದ ಇದಕ್ಕೆ ಹೆಕ್ಟೇರಿಗೆ 5000 ರೂ. ಸಹಾಯಧನ, ಚಿಗುರು ಕಸಿ ಮಾಡಿದ ಸಸಿ ಬಳಸಿದರೆ ಸರಾಸರಿ ಹೆಕ್ಟೇರೊಂದಕ್ಕೆ 2700 ರೂ.. ಸಹಾಯಧನ (ಗಿಡವೊಂದಕ್ಕೆ 6 ರೂ.) ಹಾಗೂ ಬ್ಯಾಂಕುಗಳಿಂದ 22000 ರೂ.ವರೆಗೆ ಸಾಲಗಳನ್ನು ಒದಗಿಸಲಾಗುತ್ತದೆ ಆದರೆ ಇದಕ್ಕಾಗಿ ಕನಿಷ್ಠ ಅರ್ಧ ಎಕರೆಯಷ್ಟಾದರೂ ಬೆಳೆಸಬೇಕು.

ಏಪ್ರಿಲ್ ಮೇ ತಿಂಗಳಲ್ಲಿ ಗುಂಡಿತೋಡಿ, ಜೂನ್ ತಿಂಗಳ ಹೊತ್ತಿಗೆ (ಮಳೆಗಾಲದ ಎದುರು) ಗಿಡ ನೆಟ್ಟರೆ ಮತ್ತೆ ಬೇರೆ ನೀರು ಬೇಕಿಲ್ಲ. ಮೊದಲ ಎರಡು ವರ್ಷ ಮಾತ್ರ ಗೊಬ್ಬರ ಇತ್ಯಾದಿ ಕೊಡಬೇಕು.

ಉಜಿರೆಯ ಬಳಿಯ ಬೋರ್ಡಿನ ನರ್ಸರಿಯಲ್ಲಿ ಉತ್ತಮವಾದ ಸಸಿಗಳು ಇನ್ನು ಕೇವಲ 20 ಸಾವಿರದಷ್ಟು ಮಾತ್ರ ಉಳಿದಿದ್ದು, ಆಸಕ್ತಿಯುಳ್ಳ ರೈತರು ತ್ವರೆಮಾಡಿ ತರಿಸಿಕೊಳ್ಳಬಹುದೆಂದು ಪಾಲ್ ತಿಳಿಸಿದರು.

ಇಲ್ಲಿಗೆ ಸಮೀಪದ ಉತ್ತಮೇಶ್ವರದಲ್ಲಿ ಸುಮಾರು 30 ವರ್ಷಗಳ ಹಿಂದೆಯೇ ದುರ್ಬಲ ವರ್ಗದವರಿಗೆ ನೀಡಿದ್ದ ಭೂಮಿ ಪಾಳು ಬಿದ್ದಿದ್ದು, ಸ್ಥಳೀಯ 'ಸ್ವಯಂ ಸೇವಾ ಕೇಂದ್ರ'ದವರ ಸಹಕಾರದೊಂದಿಗೆ ಅಲ್ಲಿ ರಬ್ಬರು ಬೆಳೆಯುವ ಸಿದ್ಧತೆಗಳು ನಡೆದಿರುವುದಾಗಿಯೂ ಪಾಲ್ ಅವರು 'ಮುಂಜಾವು'ಗೆ ತಿಳಿಸಿದ್ದಾರೆ

ಶಂಕರ್ ಕಂಪೆನಿ ಕಾರ್ಮಿಕರ ಬೇಡಿಕೆ ಇತ್ಯರ್ಥಕ್ಕೆ ಆಗ್ರಹ

ಕೊಪ್ಪ: ಇಲ್ಲಿನ ಶಂಕರ್ ಸಾರಿಗೆ ಸಂಸ್ಥೆಯಲ್ಲಿ ರಾಜ್ಯದ ಬೇರೆ ಸಾರಿಗೆ ಸಂಸ್ಥೆಗಳಿಗೆ ಹೋಲಿಸಿದರೆ ಸಂಬಳ- ಭತ್ಯೆ- ಸೌಲಭ್ಯಗಳು ತೀರಾ ಕಡಿಮೆಯಿದ್ದು, ಕಾರ್ಮಿಕರು ಈಗಾಗಲೇ ಸಲ್ಲಿಸಿರುವ ಬೇಡಿಕೆ ಪತ್ರದಲ್ಲಿನ ತಗಾದೆ (ಡಿಮ್ಯಾಂಡ್)ಗಳನ್ನು ಮಾತುಕತೆಗಳ ಮೂಲಕ ಇತ್ಯರ್ಥ ಪಡಿಸಲು ಕಾರ್ಮಿಕ ಮುಖಂಡ ಅನಂತಸುಬ್ಬರಾವ್ ಇಲ್ಲಿ ಆಗ್ರಹಿಸಿದರು.

ರಾಜ್ಯ ಎ. ಐ. ಟಿ. ಯು. ಸಿ. ಪ್ರಧಾನ ಕಾರ್ಯದರ್ಶಿಗಳೂ, ಕ. ರಾ. ರ. ಸಾ. ಸಂ ಕೆಲಸಗಾರರ ಒಕ್ಕೂಟದ ಉಪಾಧ್ಯಕ್ಷರೂ ಆದ ಅವರು ಫೆ. 9ರಂದು ಇಲ್ಲಿ ಕಾರ್ಮಿಕರು ಸಂಘಟಿತ ಪ್ರಯತ್ನಗಳಿಂದ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ಸಭೆಯಲ್ಲಿ ಬಿ. ಕೆ. ಸುಂದರೇಶ್, ಎಚ್. ಎಂ. ರೇಣುಕಾರಾಧ್ಯ, ಪಿ. ವಿ. ಲೋಕೇಶ್ ಮಾತನಾಡಿದರು. ಎನ್. ಆರ್. ರಾಮಚಂದ್ರ ಸ್ವಾಗತಿಸಿ, ಸಂಘದ ಕಾರ್ಯದರ್ಶಿ ಎಚ್. ಆರ್. ಸಂಜೀವ ವಂದಿಸಿದರು.

ಚಿಕ್ಕಮಗಳೂರು ಜಿಲ್ಲಾ ಪರಿಷತ್: ಅಧ್ಯಕ್ಷ-ಉಪಾಧ್ಯಕ್ಷರಾಗಿ ಕೆ. ಎಂ. ಕೃಷ್ಣಮೂರ್ತಿ — ಬಾಣೂರು

ಕಾಂಗ್ರೆಸ್ ಟಿಕೆಟ್ ಸಿಕ್ಕದೆ ಸ್ವತಂತ್ರವಾಗಿ ಸ್ಪರ್ಧಿಸಿ ಗೆದ್ದ ಬಾಣೂರು ಸೋಮಶೇಖರಪ್ಪ (ಸಕ್ರೆಪಟ್ಣ) ಅವರನ್ನು ಉಪಾಧ್ಯಕ್ಷ ಸ್ಥಾನದ ಮೂಲಕ ತನ್ನ ಕಡೆ ಒಲಿಸಿಕೊಂಡ ಜನತಾ ಪಕ್ಷ ಜಿಲ್ಲಾ ಪರಿಷತ್ ಅಧ್ಯಕ್ಷ ಸ್ಥಾನವನ್ನು "ಗೆದ್ದು"ಕೊಳ್ಳುವುದರೊಂದಿಗೆ ಆ ಪಕ್ಷದ ಕಡೂರು ಕ್ಷೇತ್ರದ ಸದಸ್ಯ ಕೆ. ಎಂ. ಕೃಷ್ಣಮೂರ್ತಿ ಪ್ರಥಮ ಜಿಲ್ಲಾ ಪರಿಷತ್ ಅಧ್ಯಕ್ಷರಾಗಿ ಆಯ್ಕೆಯಾದರು.

ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ಹಳಸೆ ಭೈರೇಗೌಡ, ಉಪ ನಾಯಕರಾಗಿ ಕೆಂಚಯ್ಯ, ಕಾರ್ಯದರ್ಶಿಯಾಗಿ ಕೆ. ವಿ. ರಾಮಪ್ಪಯ್ಯ ಮತ್ತು ಮುಖ್ಯ ಸಚೇತಕರಾಗಿ ಎಸ್. ಎಂ. ನಾಗರಾಜ್ ಇರುತ್ತಾರೆ.

ಅನಿತಾ ಕೌಲ್ : ನೂತನ ಜಿಲ್ಲಾಧಿಕಾರಿ

ಚಿಕ್ಕಮಗಳೂರಿನ ನೂತನ ಜಿಲ್ಲಾಧಿಕಾರಿಯಾಗಿ ಅನಿತಾ ಕೌಲ್ ಅಧಿಕಾರ ಸ್ವೀಕರಿಸಿದ್ದಾರೆ.

ಪುರಾತನ ಗ್ರಾಮೀಣ ರಸ್ತೆಯೊಂದನ್ನು ನುಂಗಲು ಶೃಂಗೇರಿ ಮಠದವರ ಹಟ :

'ಜನಸಾಮಾನ್ಯರೂ ಮಠ-ಮಾನ್ಯಗಳೂ'

ಮೊನ್ನೆ ಫೆ. 12ರಂದು ಮುಖ್ಯಮಂತ್ರಿಗಳು ಶೃಂಗೇರಿ ಮಠದ ಸನಿಹದಲ್ಲೊಂದು ದೊಡ್ಡ ಸೇತುವೆಗೆ ಶಂಕು ಸ್ಥಾಪನೆ ನೆರವೇರಿಸಿದರು. ಆದರೆ ಇದರ ಜೊತೆಗೇ, ಹತ್ತಿರದ ಐದು ಗ್ರಾಮಗಳ ಜನರಿಗೆ, ತಮ್ಮ ಬದುಕಿಗೆ ಅತ್ಯಗತ್ಯವಾಗಿದ್ದ ರಸ್ತೆಯೊಂದಕ್ಕೆ 'ಗೋರಿ ತೋಡಿದ' ಭೀತಿಯೂ ಆವರಿಸಿದೆ.

ಅತಿ ಪ್ರಾಚೀನವಾದ ಈ ರಸ್ತೆಯನ್ನು ಬಂದ್ ಮಾಡುವುದು ಸರಿಯೆ? ಮಠದವರಿಗೆ ಅದರ ಅಗತ್ಯವಿದೆಯೆ? ಅದಕ್ಕೆ ಅವರು ಕೊಡುವ ಕಾರಣಗಳು ಎಷ್ಟು ಸಮಂಜಸ?

ಮಠವೊಂದು ಸುತ್ತಮುತ್ತಲವರ ಬಾಳಿಗೆ ಬೆಳಕಾಗುವ ಬದಲು ಮುಳುವಾಗುವುದೆ? ಜನಸಾಮಾನ್ಯರಿಗೂ ಮಠ-ಮಾನ್ಯಗಳಿಗೂ ಇರುವ ನಂಟು ಎಂಥದಾಗಿರಬೇಕು-ಎಂಥದಾಗುತ್ತಿದೆ?

ಸಂಬಂಧಪಟ್ಟವರೆಲ್ಲರ ಆತ್ಮ ವಿಮರ್ಶೆಗಾಗಿ ಈ ಸುದೀರ್ಘ ವರದಿ.

ಶೃಂಗೇರಿ ಮಠದ ಶಂಕರ ದೇವಾಲಯದ ಬಳಿಯಿಂದ ಹೊಳೆಯಾಚೆಗಿನ ನರಸಿಂಹವನಕ್ಕೆ ಸಂಪರ್ಕ ಕಲ್ಪಿಸುವ 26 ಲಕ್ಷ ರೂ. ಅಂದಾಜು ವೆಚ್ಚದ ಸೇತುವೆಯ ಉದ್ಘಾಟನೆಯನ್ನು ಮುಖ್ಯಮಂತ್ರಿ ಹೆಗಡೆ ಫೆ 12 ರಂದು ಉದ್ಘಾಟಿಸಿದರು. ಬೊಮ್ಮಾಯಿ, ಡಿ.ಬಿ. ಚಂದ್ರೇಗೌಡ, ಎಚ್. ಜಿ. ಗೋವಿಂದ ಗೌಡ ಮತ್ತು ಬಿ. ಪಾರ್ಥಸಾರಥಿ ಸಮಾರಂಭದಲ್ಲಿ ಹಾಜರಿದ್ದು ಶಾಲು ಹೊದಿಸಿಕೊಂಡರು. ಹಿರಿಯ ಗುರುಗಳು 'ಆಶೀರ್ವಚನ' ನೀಡಿದರು.

ಮಠದ ಭಕ್ತರಾದ 'ದಾನಿಗಳು' ಖರ್ಚು ಭರಿಸಿ ಕಟ್ಟಿಸಿಕೊಡುವ ಈ ಸೇತುವೆ ಖಾಸಗಿಯಾಗಿದ್ದು, ಸರ್ಕಾರ ಕೇವಲ ನಾಮಕಾವಾಸ್ತೆ ಅನುಮತಿ ನೀಡಿರುವುದು ಮಾತ್ರ ಎಂಬುದು ಒಂದು ಸುದ್ದಿ. ಆದರೆ ಸೇತುವೆ ಉದ್ಘಾಟಿಸಿದ ಹೆಗಡೆಯಾಗಲಿ, ಗೋವಿಂದ ಗೌಡರಾಗಲಿ, ಈ ಸೇತುವೆಯಿಂದ ಸಾರ್ವಜನಿಕ ಭಕ್ತಾದಿಗಳಿಗೂ, ಆ ಕಡೆಯ ಗ್ರಾಮಗಳ ರೈತರಿಗೂ ಬಹಳ ಪ್ರಯೋಜನವಾಗಲಿದೆ ಎಂದಿದ್ದಾರೆ. ಗುರುಗಳ ಮಾತಿನಲ್ಲಿ ಕೂಡ ಈ ಅಂಶ ಸುಳಿದಿದೆ. ಈ ವಿಚಾರಗಳನ್ನು ಮತ್ತೆ ಚರ್ಚಿಸೋಣ.

ಇದಕ್ಕಿಂತ ಬಹು ಮುಖ್ಯವಾದ ವಿಚಾರವೊಂದು ಈ ಸಂಬಂಧದಲ್ಲಿ ರೈತರ ಮನಸ್ಸನ್ನು ಕದಡಿದೆ. ಅದು ವೈಕುಂಠಪುರ ಮಾರ್ಗವಾಗಿ, ತೆಕ್ಕೂರು ಮತ್ತು ಇತರ ಐದು ಗ್ರಾಮಗಳಿಗೆ ಹೋಗುವ ಪಶ್ಚಿಮವಾಹಿನಿ ರಸ್ತೆಯ ಅಳಿವು-ಉಳಿವಿನ ಕುರಿತದ್ದಾಗಿದೆ.

ಅತಿ ಪ್ರಾಚೀನ ರಸ್ತೆ

ಈ ರಸ್ತೆ ಶೃಂಗೇರಿಯ ಗಾಂಧಿ ಮೈದಾನದಿಂದ ನರಸಿಂಹವನದ ಬಳಿಯ ಸಂಧ್ಯಾ ಮಂಟಪದ ಬಳಿ ಹೊಳೆ ದಾಟಿ ನರಸಿಂಹ ವನಕ್ಕೆ ಸುತ್ತು ಹಾಕಿಕೊಂಡು ಪಶ್ಚಿಮವಾಹಿನಿಯ ಕಡೆಗೂ, ಮುಂದೆ ಕಾಲ ಭೈರವನ ಗುಡ್ಡದ ಬಳಿಯಿಂದ ತೆಕ್ಕೂರು-ವೈಕುಂಠಪುರದ ಕಡೆಗೂ ಹೋಗುತ್ತದೆ. ಬಹುಶಃ ಶೃಂಗೇರಿ ಎಂಬುದೊಂದು ಊರು ಹುಟ್ಟಿದಾಗಿನಿಂದಲೂ ಇರುವ ಈ ರಸ್ತೆ ಅಂದಿನಿಂದ ಈವರೆಗಿನ ನಕಾಶೆಗಳಲ್ಲೂ ಕಂಡಿದೆ. ಹಿಂದೆ ಈ ಗ್ರಾಮಗಳಿಗೆ ಶೃಂಗೇರಿಯ ಸಂಪರ್ಕಕ್ಕೆ ಇದೊಂದೇ ರಸ್ತೆಯಾಗಿತ್ತು. (ಮಳೆಗಾಲದಲ್ಲಿ ಸಂಪರ್ಕವೇ ಇರಲಿಲ್ಲ.) ವೀರಪ್ಪಗೌಡರು ಶಾಸಕರಾಗಿದ್ದಾಗ 1968ರಲ್ಲಿ ಮೆಣಸೆ ಸೇತುವೆ ಕಡೆಯಿಂದ ಸರ್ವಋತು ರಸ್ತೆ ಮಾಡಿದರೂ, ಅದು ಸುಮಾರು 3 ಕಿ.ಮೀ. ಬಳಸು ಸುತ್ತಾಗುವುದರಿಂದ ಇಂದಿಗೂ ಬೇಸಿಗೆಯೊಂದನ್ನು ಬಿಟ್ಟರೆ, (ಹೊಳೆ ದಾಟುವಷ್ಟು ಕಾಲವೂ) ಈ ಗ್ರಾಮಗಳಿಗೆ ಇದೇ ಸಂಪರ್ಕ ರಸ್ತೆಯಾಗಿ ಬಳಸಲ್ಪಡುತ್ತಿದೆ.

ಇಷ್ಟೇ ಅಲ್ಲ, ಗುರುಗಳು ಮಠದಿಂದ ನರಸಿಂಹ ವನಕ್ಕೆ ಹೋಗುವುದಕ್ಕೂ ಸಹ ಇದೇ ರಸ್ತೆಯನ್ನು ಬಳಸುತ್ತಿದ್ದು, ಕಳೆದ ವರ್ಷದಿಂದ ಮಾತ್ರ ಬೇರೆ ರಸ್ತೆ ಮಾಡಿಕೊಂಡಿದ್ದಾರೆ.

ರಸ್ತೆಗೆ ಮಠದವರಿಂದ ಕುತ್ತು

ಹೀಗೆ ಹಿಂದಿನಿಂದಲೂ ಈ ರಸ್ತೆ ಈ ಎಲ್ಲಾ ಗ್ರಾಮಗಳವರಿಗೆ (ಜೊತೆಗೆ ಮಠದವರಿಗೆ ಸಹ) ಇಷ್ಟೊಂದು ಉಪಕಾರಿಯಾಗಿದ್ದರೂ ಸಹ, ಈಚಿನ ವರ್ಷಗಳಲ್ಲಿ ನರಸಿಂಹ ವನದಲ್ಲಿ ಮಠದವರು ಜಮೀನು ಮಾಡಿದ ನಂತರ, ಕಳೆದ ಒಂದು-ಒಂದೂವರೆ ವರ್ಷದಿಂದ ಈ ರಸ್ತೆಯನ್ನು ಮುಚ್ಚಲು ಎಲ್ಲಾ ತರದ ಯತ್ನಗಳನ್ನೂ ಮಾಡುತ್ತಿದ್ದು, ಇದಕ್ಕೆ ಗ್ರಾಮಸ್ಥರು ತೀವ್ರ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದರೂ ತಮ್ಮ ಹಟವನ್ನು ಸಾಧಿಸುತ್ತಿದ್ದಾರೆ.

ಮೊದಲು ಕಲ್ಕಟ್ಟೆಯ ಬಳಿಯ ಹಳೆಯ ದಾರಿಯೊಂದನ್ನು ದುರಸ್ತಿ ಮಾಡಿ, ಗುಡ್ಡದ ಮೇಲಿಂದ ದೊಪ್ಪನೆ ಹೊಳೆ ಬುಡಕ್ಕೆ 'ಇಳಿಯು'ವಂತೆ ಗಾಡಿ ರಸ್ತೆಯೊಂದನ್ನು ಮಾಡಿದರು. ಇದು ಒಂದು ಕಿ.ಮೀ. ನಷ್ಟು ಸುತ್ತಾಗುವುದಲ್ಲದೆ, ಗಾಡಿ ಓಡಾಡಿಸಲು ಆಗುವಂತಿಲ್ಲವಾದ್ದರಿಂದ ಜನ-ಗಾಡಿ ಓಡಾಡಲಿಲ್ಲ. ಆಗ ಹಳೇ ರಸ್ತೆಗೆ ಬೇಲಿ ಕಟ್ಟಿ, ಮಧ್ಯದಲ್ಲಿ ಅವರೇ ನೀರು ಬಿಡಲು ಮಾಡಿಕೊಂಡಿದ್ದ ಮೋರಿಯೊಂದನ್ನು ಕಿತ್ತು, ಗಾಡಿ ಓಡಾಡದಂತೆ ಮಾಡಿದರು. ಅಲ್ಲದೆ ಮಠದ ಹತ್ತಿರ, ಹೊಳೆಯಿಂದ ಮೇಲೆ ಗಾಡಿಗಳು ಹತ್ತದಂತೆ ಮಣ್ಣು ತೆಗೆಸಿದರು. ಇಷ್ಟೆಲ್ಲಾ ಆದ ಮೇಲೆ, ಪಶ್ಚಿಮವಾಹಿನಿಯ ಕೆಲವರ ಹತ್ತಿರ, 'ನಿಮಗೆ ಬೇರೆ ರಸ್ತೆ ಮಾಡಿಕೊಡುತ್ತೇವೆ' ಎಂದು ಒಪ್ಪಿಸಲು ಹೋಗಿ ಅವರೊಪ್ಪದಿದ್ದಾಗ ಅವರ ಎಲ್ಲಾ ಜಮೀನನ್ನೂ ಮಠದವರು ಖರೀದಿಗೆ ಕೇಳಿದರಂತೆ. ಅದಕ್ಕೂ ಒಪ್ಪದಿದ್ದಾಗ, "ನೋಡಿ, ಮಠದವರ ಹತ್ತಿರ ನೀವು ಹೋರಾಡುವುದು ಹೌದ? ಅವರು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡುತ್ತಾರೆ. ಯಾವ ಕೋರ್ಟಿಗೆ ಹೋದರೂ ನಿಮ್ಮಿಂದ ಸಾಧ್ಯವಿಲ್ಲ. ಅಲ್ಲದೆ ಸುಮ್ಮನೆ ಗುರುಗಳ ದೃಷ್ಟಿಗೆ ಬೀಳುವುದು ಒಳ್ಳೆಯದಲ್ಲ. ಇದರಿಂದ ತೊಂದರೆಯೇ ಸರಿ" ಎಂದು ಯಾರಿಂದಲೋ ಹೇಳಿಸಿದರಂತೆ. ಆದರೂ ಗ್ರಾಮಸ್ಥರು ಬಿಡದೆ, ಶಾಸಕರಿಗೆ, ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟು ಎ. ಸಿ. ಗೋವಿಂದಪ್ಪನವರು ಬಂದು ಪರಿಶೀಲಿಸಿ, ಈ ರಸ್ತೆಯನ್ನು ಮುಚ್ಚಿ ಮಠದವರಿಗೆ ಕೊಟ್ಟರೆ ಹಳ್ಳಿಗರಿಗೆ ತೊಂದರೆ ಆಗುತ್ತೆ ಎಂದು ತೀರ್ಪು ಕೊಟ್ಟರು. ಆಗ ಪಶ್ಚಿಮವಾಹಿನಿಯವರೆಗೆ ರಸ್ತೆ ಬಿಟ್ಟು ಮುಂದಿನ ರಸ್ತೆಯನ್ನು ಹೇಗಾದರೂ ಕಬಳಿಸಲು ಯೋಚಿಸಿದರು.

ಮಠದವರ ಈ ಎಲ್ಲ ಹುನ್ನಾರಗಳಲ್ಲಿ ಶರೀಕಾಗಿದ್ದ ತಹಸೀಲ್ದಾರ್ ಪ್ರಭಾಕರ ಶರ್ಮ ಇದಕ್ಕೆ ಅನುಕೂಲವಾದ ಸಮಯಕ್ಕಾಗಿ ಕಾಯುತ್ತಿದ್ದಾಗ ಮಠಕ್ಕೆ ಸರ್ಕಾರದಿಂದ 6 ಲಕ್ಷವೋ 16 ಲಕ್ಷವೋ ಹಣ ಬಂತು. ಅದರಲ್ಲಿ 10 ಸಾವಿರ ರೂ.ಗಳನ್ನು ಜಿಲ್ಲಾ ಕ್ರೀಡಾಂಗಣ ನಿಧಿಗೆಂದು ಜಿಲ್ಲಾಧಿಕಾರಿಗಳಿಗೆ ಕೊಡಿಸಿ ಅನಂತರ ಗುರುಗಳಿಂದ ಡಿ.ಸಿ.ಗೆ 'ಒಂದು ಮಾತು' ಹೇಳಿಸಿದರಂತೆ. ಡಿ.ಸಿ. ಇನ್ನೇನು ಹೇಳುತ್ತಾರೆ? ದುಡ್ಡು ತಗೊಂಡಾಗಿದೆ! "ಆಯ್ತು, ಅದೇನು ನೋಡಿ ಕಳಿಸಿಕೊಡಿ" ಎಂದು ತಹಸೀಲ್ದಾರ್‌ಗೆ ಹೇಳಿದ್ದೇ ತಡ, ಮೊದಲೇ ಸಾಕಷ್ಟು ರಿಕಾರ್ಡ್ ಸಿದ್ಧಪಡಿಸಿಟ್ಟುಕೊಂಡಿದ್ದ ತಹಸೀಲ್ದಾರ್ ಮಠದವರ ಅರ್ಜಿಯನ್ನೂ ಸೇರಿಸಿ ಕಳಿಸಿದರು. ಅಲ್ಲಿಂದ ಸರ್ಕಾರದ ಪರವಾಗಿ ಈ ರಸ್ತೆಯ ಸ್ವಾಧೀನಕ್ಕೆ ಶಿಫಾರಸ್ಸಾಗಿ, ಅದಕ್ಕೆ ಯಾರದಾದರೂ ತಕರಾರು ಇದ್ದಲ್ಲಿ ಸಲ್ಲಿಸುವಂತೆ ಗೆಜೆಟ್ ಪ್ರಕಟಣೆ ಕೂಡ ಆಗಿ ಹೋಯಿತು.

ಊರಿನವರಿಗೆ ಇದು ತಿಳಿದ ಕೂಡಲೆ "ಡಿ. ಸಿ. ಮಠದವರಿಂದ ಈ ರಸ್ತೆಯ ಬಗ್ಗೆ 10 ಸಾವಿರ ರೂ. ಲಂಚ ತಗೊಂಡಿದ್ದಾರಂತೆ" ಎಂದು ನಮ್ಮ ಪತ್ರಿಕೆಗೆ ದೂರು ಕೊಟ್ಟರು. ಕೂಡಲೇ ನಾನು ಈ ಬಗ್ಗೆ ಸ್ಪಷ್ಟೀಕರಣ ಕೇಳಿ ಡಿಸಿಗೆ ಬರೆದುದಕ್ಕೆ ಅವರು ತಕ್ಷಣ ಉತ್ತರಿಸಿ, "ಹಣ ತೆಗೆದುಕೊಂಡಿದ್ದು ನಿಜ. ಆದರೆ ನನ್ನ ಸ್ವಂತಕ್ಕಲ್ಲ, ಸಾರ್ವಜನಿಕ ಉದ್ದೇಶಕ್ಕಾಗಿ. ಈ ರಸ್ತೆಯ ವಿಚಾರದಲ್ಲಿ ಗ್ರಾಮಸ್ಥರು ತಮ್ಮ ತಕರಾರು ತಿಳಿಸಲಿ, ತಹಸೀಲ್ದಾರರು ನಿಮಗೆ ಅನುಕೂಲ ಮಾಡಿ

(3ನೇ ಪುಟಕ್ಕೆ)

ಪದ್ಯಾಂಕಣ

"ಬಸ್ಸು ಬಂತು...."

ಖಾಸಗಿ ಕಂಪೆನಿ ಸಾರಿಗೆ ಬಸ್ಸು
ಸ್ಟಾಪಿಗೆ ಬಂದಿತ್ತು
ಸಂತೆಗೆ ಹೋಗಲು ಜನಗಳ ಗುಂಪು
ಸಾಗರದಂತಿತ್ತು
ಕ್ಲಾಸಿಗೆ ಹೋಗುವ ಹುಡುಗ ಹುಡುಗಿಯರು
ಕ್ಲಾರ್ಕು ಕಚೇರಿಗೆ
ಹೂಟಿಯ ಮುಗಿಸಿ ತಿಮ್ಮನು ಹೊರಟ
ಸೇರಲು ರಿಪೇರಿಗೆ
ಸೆಂಟನು ಹಾಕಿದ ಕಾಲೇಜ್ ಹುಡುಗ
ಹುಡುಗಿ ಮೇಲಾಗಿ
ಕವಳವ ಹಾಕಿದ ಅಜ್ಜ-ಅಜ್ಜಿಯರು
ತುಂಬಿದರೊತ್ತಾಗಿ
ಟಾಪಿನ ಮೇಲೂ ಏರಿದರಾಗ
ಒಳಗಡೆ ತುಂಬಿತ್ತು
ಹಾರನ್ ಮಾಡುತ ವಿಮಾನ ರೂಪದಿ
ಮೋಟರು ಸಾಗಿತ್ತು
ತುಂಗಾನದಿಯ ದೊಡ್ಡ ಸೇತುವೆ
ಹತ್ತಿರ ಬಂದಿತ್ತು
ಹೊಳೆಗೆ ಬಂದ ಆಗಸನ ಕತ್ತೆ
ರಸ್ತೆಗೆ ನಿಂದಿತ್ತು
ಗಡಿಬಿಡಿಯಲ್ಲಿ ಡ್ರೈವರ್ ಕಾಲು
ಬ್ರೇಕನು ಒತ್ತಿತ್ತು
ಹುಡುಗನ ಕಾಲು ಹುಡುಗಿಯ ಕಾಲ
ಮೆಲ್ಲನೆ ತಿಕ್ಕಿತ್ತು
ಯಾರೋ ಹಿಡಿದಾ ಮಾಂಸದ ಚೀಲ
ಭಟ್ಟರ ಕೈಲಿತ್ತು
ಬೊಮ್ಮಿಯ ಬಾಳೆ ಹಾರುತ ಬಂದು
ತಿಮ್ಮನ ಕೈಲಿತ್ತು
ಹುಡುಗಿಯ ಮೇಲೆ ಹುಡುಗನು ಬಿದ್ದ
ಹುಡುಗಿಗೆ ತಲೆ ತಿರುಗಿ
ನಡುಗಿದ ಅಜ್ಜರ ಸೊಡ್ಡು ಒಡೆಯಿತು
ಸೀಟಿಗೆ ಮುಖ ತಾಗಿ
ಟಾಪಲಿ ಇದ್ದ ಸ್ಯಾಬರ ಮೂಟೆ
ಕೆಳಗಡೆ ಬಂದಿತ್ತು
ಏನೇ ಆದರೂ ಡ್ರೈವರ್ ದೃಷ್ಟಿ
ಮಾರ್ಗದ ಮೇಲಿತ್ತು
ಜೀವವು ಉಳಿಯಿತು ಎನ್ನುತ ಜನರು
ಯೋಚನೆ ಮಾಡುತ್ತಾ
ಪೊಂ ಪೊಂ ಎನ್ನುತ ಹೊರಟಿತು ಬಸ್ಸು
ಸೇತುವೆ ದಾಟುತ್ತಾ
ಲೈನಿಗೆ ಒಂದೇ ಬಸ್ಸಿನ ಕಥೆಯಾ
ಸಾರಿ ಹೇಳಿತ್ತು
ಮಲೆನಾಡ ಮಂದಿಯ ನಿತ್ಯದ ಗೋಳಿಗೆ
ಕನ್ನಡಿ ಹಿಡಿದಿತ್ತು

—ಬಾಳೆಕುಡಿಗೆ ಪರಮೇಶ್ವರ

ಬೆಳಕು

ಬಾ ಬೆಳಕೆ ಬೇಗಬಾ
ನನ್ನ ಮನೆಯೊಳಗೆ ನನ್ನ ಮನದೊಳಗೆ
ಕವಿದ ಕಾರ್ಮೋಡವನು
ಹೊಡೆದೋಡಿಸಲು ಬಾ
ಬಡತನದ ಕರಿಮೋಡದಲ್ಲೊಮ್ಮೆ
ಹೊಕ್ಕು ಬಾ
ನಿನಗಾಗಿ ಕಾಯುತಿಹೆ ಅನುದಿನವೂ,
ಬೇಗ ಬಾ.

ದಿನವೂ ನಿರೀಕ್ಷಿಸುತಿಹೆ, ನೀ ಬಂದು
ಬಾಳ ಬೆಳಗುವಿಯೆಂದು
ಅನುದಿನವೂ ನಂಬಿರುವೆ
ನೀ ಬರುವಿಯೆಂದು
ಬಾ ಬೆಳಕೆ ಬಾ, ಬೇಗ ಬಾ

—ಕೆ. ನಾಗರತ್ನ

ಜನಸಾಮಾನ್ಯರೂ ಮಠ-ಮಾನ್ಯಗಳೂ

(2ನೇ ಪುಟದಿಂದ)
ಕೊಡದಿದ್ದರೆ ಅದು ಮುಂದೆ ನನ್ನಲ್ಲಿ ಬಂದಾಗ ನಾನು ಸಾರ್ವಜನಿಕರಿಗೆ ತೊಂದರೆಯಾಗದ ಹಾಗೆ ಮಾಡುತ್ತೇನೆ" ಎಂದು ತಿಳಿಸಿದ್ದಾರೆ.

ಇದರಂತೆ 6-2-87ರಂದು ಈ ಕುರಿತ ವಿಚಾರಣೆಯಿದ್ದು, ತಕರಾರು ಅರ್ಜಿಗೆ ಸಹಿ ಮಾಡಿದ್ದವರಿಗೆ ತಹಸೀಲ್ದಾರರಿಂದ ನೋಟೀಸ್ ಹೋಗಿತ್ತು. ನೂರಕ್ಕೂ ಹೆಚ್ಚು ಸಹಿಗಳಲ್ಲಿ ಕೆಲವು ಯಾರದೆಂದು ಗುರುತು ಹಿಡಿಯಲಾಗದ್ದರಿಂದ ಅವರಿಗೆಲ್ಲ ನೋಟೀಸು ಕಳಿಸಲು ಸಾಧ್ಯವಾಗದೆಯೂ ಒಟ್ಟು 53 ಜನ ವಿಚಾರಣೆಗೆ ಹಾಜರಾಗಿ ತಮಗೆ ಈ ರಸ್ತೆ ಅತೀ ಅಗತ್ಯವೆಂದು ಆಗ್ರಹಿಸಿದ್ದಾರೆ.

ಅಧಿಕಾರ ಯಂತ್ರ

ಗೆಜೆಟ್ ಪ್ರಕಟಣೆಯಲ್ಲಿ, "ಸದರಿ ರಸ್ತೆ ಯಾರ ಉಪಯೋಗಕ್ಕೂ ಇಲ್ಲದೆ ಅನುಪಯುಕ್ತವೆಂದು ಕಂಡು ಬಂದಿರುವುದರಿಂದ ಅದನ್ನು ಮುಟ್ಟುಗೋಲು ಹಾಕಿಕೊಂಡು ಮಠದವರಿಗೆ ವಹಿಸಿಕೊಡುವ ಬಗ್ಗೆ...." ಎಂಬರ್ಥದ ಉಲ್ಲೇಖವಿದೆ. ವಾಸ್ತವವಾಗಿ ಈ ರಸ್ತೆ ಸಾರ್ವಜನಿಕರಿಗೆ ಈವತ್ತಿಗೂ ಬಹು ಉಪಯೋಗಿ ಆಗಿರುವುದು ಮಾತ್ರವಲ್ಲ, ತೀರಾ ಈಚಿನವರೆಗೂ ಮಠದವರಿಗೆ ಸಹ ಉಪಯೋಗವಾಗಿದ್ದುದನ್ನು ಹಿಂದೆ ವಿವರಿಸಿದೆ. ಆದರೆ ಮಠದವರಿಗೆ ಬೇಡವೆಂದು ಕಾಣುವುದೇ ತಡ, ಸರಕಾರಕ್ಕೆ ಕೂಡ ಅದು ಬೇಡದ್ದಾಗಿ ಬಿಟ್ಟಿತೆ? ಅದನ್ನು ಬಂದ್ ಮಾಡಿಸಿ ಮಠದವರಿಗೆ ವಹಿಸಿಕೊಡಲು ಎಷ್ಟು ಕಾಳಜಿ, ಎಷ್ಟು ತರಾತುರಿ? ಇದೇ ಸರ್ಕಾರಿ ಯಂತ್ರ ಸಾವಿರಾರು ಜನರಿಗೆ ಉಪಯುಕ್ತವೋ ಅತ್ಯಗತ್ಯವೋ ಆದ ಯಾವುದಾದರೊಂದು ಕೆಲಸಕ್ಕೆ ಇದೇ ರೀತಿ ಮುತುವರ್ಜಿ ವಹಿಸಿದ್ದು ಎಲ್ಲಾದರೂ ಉಂಟೆ? ಹಾಗಾದರೆ ಸರ್ಕಾರ ಯಾರದು? ಪ್ರಜೆಗಳು ಅದಕ್ಕೆ ಏನಾಗಬೇಕು? ಸರ್ಕಾರಿ ಯಂತ್ರ ಯಾರ ಅಡಿಯಾಳು? ಎಂಬುದೆಲ್ಲ ಸಾರ್ವಜನಿಕರ ಪ್ರಶ್ನೆ.

ಮಠದವರ ನಿಲುವು

ನಮ್ಮ 'ಘನ' ಸರ್ಕಾರದ ಎಲ್ಲಾ ಯಂತ್ರಗಳೂ ಮಠದವರ ಪರವಾಗಿಯೇ ಕೆಲಸ ಮಾಡಿ ಈ ರಸ್ತೆಯನ್ನು ಮುಚ್ಚುವ ಮೂಲಕ ಸಾರ್ವಜನಿಕರಿಗೆ ಇಷ್ಟೆಲ್ಲ ತೊಂದರೆ ಕೊಡಬೇಕಾದರೆ, ಮಠದವರಿಗೆ ನಿಜವಾಗಿಯೂ ಈ ರಸ್ತೆ ಅಷ್ಟೊಂದು ಅವಶ್ಯಕವೆ ಅಥವಾ ಅದು ಇರುವುದರಿಂದ ಅಷ್ಟೆಂಥ ತೊಂದರೆ ಎಂದು ವಿಮರ್ಶಿಸ ಹೋದರೆ, ಇವರಿಗೆ ಮಾಡಲು ಬೇರೆ ಬಮುಕೇ ಇಲ್ಲವೆ? ಎನ್ನುವಂತಾಗುತ್ತದೆ. ಮಠದ ಆಡಳಿತಾಧಿಕಾರಿ ಗಿರಿಧರ ಶಾಸ್ತ್ರಿಗಳ ಪ್ರಕಾರ–ಈ ರಸ್ತೆ ಅವರ ಜಮೀನಿನ ಮಧ್ಯೆ ಹೋಗುವುದರಿಂದ (ಜಮೀನಿಗಿಂತ ಶತಮಾನಗಳಷ್ಟು ಮುಂಚೆಯೇ ಇದ್ದ ರಸ್ತೆ!) ಜಮೀನಿನಲ್ಲಿರುವ ತೆಂಗಿನ ಗಿಡಗಳಿಂದ ಕಾಯಿ ಕಳುವಾಗುತ್ತಿದೆಯಂತೆ. ಈಗ ಕೆಲವೇ ಮರ ಇದ್ದು, ಇನ್ನೂ ಹೆಚ್ಚಿಗೆ ತೆಂಗಿನ ತೋಟ ಬೆಳೆಸುವ ಯೋಚನೆಯಿದೆಯಂತೆ. ಇದು ಒಂದನೆಯ ಅಂಶ. ಎರಡನೆಯ ಅಂಶ ಸ್ವಲ್ಪ "ಗುಟ್ಟಿನದು"! ಯಾರೋ ಮಠದ ಭಕ್ತರಾದ 'ದಾನಿಗಳು' ಖಾಸಗಿಯಾಗಿ, ಮಠದಿಂದ ನರಸಿಂಹವನಕ್ಕೆ ಹೋಗಲು ಈ ಸೇತುವೆ ಕಟ್ಟಿಸುವುದಂತೆ. ಆದರೆ ಇಲ್ಲಿ ರಸ್ತೆಯಿದ್ದರೆ ಬಡಪಾಯಿ ಹಳ್ಳಿಗರೂ ಈ ಸೇತುವೆಯ ಮೇಲೇ ಓಡಾಡುವುದರಿಂದ ಅದು 'ಮಡಿ' ಸೇತುವೆಯಾಗಿ ಉಳಿಯುವುದಿಲ್ಲವಂತೆ!!

ಗ್ರಾಮಸ್ಥರ ಪ್ರತಿಕ್ರಿಯೆ

ಈ ಎರಡೂ ವಿಚಾರಗಳ ಬಗ್ಗೆ ಗ್ರಾಮಸ್ಥರ ಅಭಿಪ್ರಾಯ ಕೇಳಿ:

ಮಠದ ಜಮೀನಿನ ತೆಂಗಿನಕಾಯಿ ಮುಟ್ಟಲು ಸುತ್ತಮುತ್ತಲವರಿಗೆ ಯಾರಿಗೂ ಧೈರ್ಯ ಬರುವುದಿಲ್ಲ; ದೇವರದ್ದು, ಮಠದ್ದು ಎಂಬ ಭಯವಿದೆ. ಆದರೆ ಆ ಮಠದ ಒಳಗೇ, ಆ ದೇವರ 'ಹತ್ತಿರ'ವೇ ಇರುವ ಇವರಿಗೇ ದೇವರ ಭಯ, ಮಠದ ಬಗ್ಗೆ ಪ್ರೀತಿ–ಗೌರವ ಇಲ್ಲದಿರುವುದರಿಂದ ಒಳಗಡೆಯವರೇ ಯಾರೋ ಕಳವು ಮಾಡುತ್ತಿರಬೇಕು.

ಹಾಗೂ ಒಂದು ವೇಳೆ ಕಾಯಿ ಕಳ್ಳತನವಾಗುತ್ತೆ ಎಂದಿಟ್ಟುಕೊಂಡರೂ, ಅದಕ್ಕಾಗಿ ತಲತಲಾಂತರದಿಂರುವ ರಸ್ತೆಯನ್ನು ಬಂದ್ ಮಾಡುವುದು ಎಷ್ಟು ಬಾಲಿಶ? ಈಗಾಗಲೇ ಪಕ್ಕದಲ್ಲಿ ದೊಡ್ಡ ದರೆಗೆ ಕಲ್ಲು ಕಟ್ಟಣ ಕಟ್ಟಿಸಿ ಲಕ್ಷಾಂತರ ರೂಪಾಯಿ 'ವಿನಿಯೋಗ'ವೋ ಮುಳುಗಡೆಯೋ ಮಾಡಿರುವ ಮಠದವರಿಗೆ ಅದೇ ಗೋಡೆಯನ್ನು ಇನ್ನೂ ಸ್ವಲ್ಪ ದೂರ ವಿಸ್ತರಿಸುವುದೇನೂ ದೊಡ್ಡ ವಿಷಯವಲ್ಲ.

ಇನ್ನು ಸೇತುವೆ ಮೇಲೆ ಊರಿನವರು ಓಡಾಡುತ್ತಾರೆ, ಮಡಿ ಸೇತುವೆ ಆಗುವುದಿಲ್ಲ ಎಂಬುದಕ್ಕೆ ಊರವರ ಉಗ್ರ ಪ್ರತಿಭಟನೆಯಿದೆ. "ನಾವೆಲ್ಲ ತಿಳಿದಂತೆ ಮಠ ನಮ್ಮೆಲ್ಲರದ್ದು, ಅದೊಂದು ಸಾರ್ವಜನಿಕ ಸಂಸ್ಥೆ. ಅವರ ಸೇತುವೆಯಲ್ಲಿ ನಾವು ಓಡಾಡಬಾರದೆಂದರೆ ಮಠ, ಯಾರದ್ದು ಅಂತ ಆಗಬೇಕು; ಗುರುಗಳು, ಧರ್ಮ, ದೇವರು ಎಲ್ಲ ಯಾರ ಸ್ವತ್ತು ಅಂತ ಆಗಬೇಕು. ಇವರಿಗೆ ಯಾರೋ 'ಬಾಂಬ್ ಹಾಕುತ್ತೇವೆ' ಎಂದು ಹೆದರಿಸಿದರೆ ಆಗ ನಮ್ಮನ್ನೆಲ್ಲ ಕರೆದು ಮೀಟಿಂಗ್ ಮಾಡುತ್ತಾರೆ. ಕುಂಭಾಭಿಷೇಕವೋ, ದೊಡ್ಡದೇನಾದರೂ ಸಭೆ–ಸಮಾರಂಭವೋ ನಡೆಯಬೇಕಾದರೆ ನಮ್ಮೆಲ್ಲರ 'ಸಹಕಾರ' ಕೇಳುತ್ತಾರೆ. "ಎಲ್ಲರೂ ಬನ್ನಿ. ನೀವೆಲ್ಲ ಬಂದು ಹೋಗುತ್ತ ಇರಬೇಕು. ಮಠದ ಆಗು–ಹೋಗುಗಳಲ್ಲಿ ಭಾಗಿಗಳಾಗಬೇಕು. ಇದೆಲ್ಲ ನಿಮ್ಮದೇ ನನಗೇನು ಬೇಕು?" ಎಂದು ಗುರುಗಳೇ ಭಾಷಣ ಬಿಗಿಯುತ್ತಾರೆ. ಅಷ್ಟೆಲ್ಲ ಇದ್ದರೆ, 'ನಮ್ಮೂರಿನ ಜನರಲ್ಲವ? ಓಡಾಡಿಕೊಳ್ಳಲಿ' ಅಂತ ಯಾಕೆ ಹೇಳಬಾರದು? ಅದಕ್ಕೇ, ನಮಗೆ ಇವರ ಸೇತುವೆಯೂ ಬೇಡ, ಇವರ ಸಹವಾಸವೂ ಬೇಡ. ನಮ್ಮ ರಸ್ತೆಯನ್ನು ಮಾತ್ರ ಇವರು ಕಬಳಿಸುವುದೂ ಬೇಡ...." ಎನ್ನುತ್ತಾರೆ.

ಹಿಂದೆ ಮಠದವರೇ ತಪ್ಪಿಸಿದ ಸರ್ವಜನೋಪಯೋಗಿ ಸೇತುವೆ

ವಾಸ್ತವವಾಗಿ, ಇದೇ ರಸ್ತೆಗೆ, ಇಲ್ಲೇ ಹೊಳೆದಾಟುವಲ್ಲೇ ಒಂದು ಸಾರ್ವಜನಿಕ ಉಪಯೋಗದ ಸೇತುವೆಯನ್ನು ನಿರ್ಮಿಸಲು ಓಂದೆ ಕಡಿದಾಳ್ ಮಂಜಪ್ಪನವರೂ, ಅನಂತರ ದೇವರಾಜ ಅರಸರ ಸರ್ಕಾರವೂ ಯೋಚಿಸಿದಾಗ ಇದೇ ಮಠದವರೇ ಅದನ್ನು ತಡೆದಿದ್ದರು–ಮಠದ (ತಮ್ಮ) ಶಾಂತಿಗೆ ಭಂಗ ಬರುತ್ತೆ ಎಂದು. ಆದರೆ ಮೊನ್ನೆ ಸಭೆಯಲ್ಲಿ ಇದನ್ನು ನೆನೆಸಿಕೊಂಡ ಗುರುಗಳು, ಈಗ ನಾವೇ ಸೇತುವೆ ಕಟ್ಟಿಸುವ ಪ್ರಮೇಯ ಬಂದಿದೆ ಎಂದರು. ಅವರೇನೋ ಇದು ಸಾರ್ವಜನಿಕರಿಗೂ ಉಪಯೋಗವಾಗುತ್ತೆ ಎಂದರು ನಿಜ. ಆದರೆ ಮೂಲ ರಸ್ತೆಯೇ ಇಲ್ಲದ ಮೇಲೆ ಸಾರ್ವಜನಿಕರಿಗೆ ಉಪಯೋಗವಾಗುವುದು ಎಲ್ಲಿಂದ? (ಒಂದು ವೇಳೆ ರಸ್ತೆ ಉಳಿದರೂ ಸಹ, ಈ ಸೇತುವೆಯನ್ನು ಸೀದಾ ನರಸಿಂಹವನದೊಳಕ್ಕೆ ಇಳಿಸಿ ಪೂರಾ 'ಖಾಸಗಿ' ಮಾಡಿಕೊಳ್ಳುತ್ತಾರೆಂಬ ವದಂತಿಯೂ ಇದೆ.)

ಧರ್ಮಕಾರ್ಯ?

ಹೀಗೆ, ಸರ್ಕಾರದಿಂದಲೇ ಹತ್ತಾರು ಹಳ್ಳಿಗಳಿಗೆ ಆಗುವಂತಿದ್ದ ಮಹದುಪಕಾರವನ್ನು ಕೇವಲ ತಮ್ಮ ಹಿತಕ್ಕಾಗಿ ತಪ್ಪಿಸಿ, ಈಗ ಅದೇ ಜಾಗದಲ್ಲಿ, ಪುನಃ ಕೇವಲ ತಮ್ಮ ಹಿತ ಮಾತ್ರಕ್ಕಾಗಿ ಅದೇ ಸೌಕರ್ಯವನ್ನು ಸೃಷ್ಟಿಸಿಕೊಂಡು, ಅದಕ್ಕೆ 'ಖಾಸಗಿ' ಎಂದು ಹೆಸರಿಟ್ಟುಕೊಳ್ಳುವುದು ಯಾವ ರೀತಿಯ ಧರ್ಮಕಾರ್ಯ ಎನ್ನಿಸಿಕೊಳ್ಳುತ್ತದೆಯೋ! ಎನ್ನುತ್ತಾರೆ ಜನ.

ಈ ರಸ್ತೆಯ ತಕರಾರು ಆರಂಭವಾದಾಗ ಗಿರಿಧರ ಶಾಸ್ತ್ರಿಗಳಿಗೆ ಒಂದು ಸಲಹೆ ಕೊಡಲಾಗಿತ್ತು– ಈ ಗ್ರಾಮಗಳಲ್ಲಿ ಗಾಡಿ ಇರುವ ಪ್ರತಿಯೊಂದು ಮನೆಯವರನ್ನೂ ಕೇಳಿ. ಹೇಗೂ ಅವರೆಲ್ಲ ಮಠದ ಭಕ್ತರೇ. ಅವರುಗಳೆಲ್ಲ ಒಪ್ಪಿದರೆ ನಮ್ಮ ಆಕ್ಷೇಪಣೆ ಏನೂ ಇಲ್ಲ ಎಂದು. ಆದರೆ ಅವರು ಹೀಗೆ ಜನಪರವಾಗಿ, ಜನರ ಜೊತೆ ವಿಚಾರ ವಿನಿಮಯ ನಡೆಸುವ ಬದಲು ಸರ್ಕಾರವನ್ನು 'ಸರಿ ಮಾಡಿ ಕೊಳ್ಳು'ವುದೇ ಸುಲಭವೆಂದು ಅದೇ ದಾರಿ ಹಿಡಿದರು. ಅವರ ಈ ದಾರಿಯೆದುರು ಬಡವರ ಗಾಡಿದಾರಿಗೆ ಸ್ಥಳವೆಲ್ಲಿ?

ಮಠ-ಮಾನ್ಯಗಳು— ಸಾಮಾಜಿಕ ಪ್ರಶ್ನೆ

ಮಠ– ಸಂಸ್ಥಾನಗಳೆಂದರೆ ಎಲ್ಲರಿಗೂ ಭಯ–ಭಕ್ತಿ. **ಸಾಮಾನ್ಯರಿಗೆ ಮಠದ ದೇವರ ಭಯವಾದರೆ, ಉಳಿದವರಿಗೆ ಮಠದವರ ಭಯ!** ಏಕೆಂದರೆ ಮಠದವರು ಬೇರೆಲ್ಲರಿಗಿಂತ ಹೆಚ್ಚಾಗಿ ನಮ್ಮನ್ನಾಳುವ ಪ್ರಭುಗಳಿಗೆ ಪ್ರಭುಗಳಾದ್ದರಿಂದ ಪ್ರಭಾವಿಗಳು ಎಂದು. ಈ ದೇಶದ ಪ್ರಧಾನಿಯಾಗಲಿ, ರಾಷ್ಟ್ರಪತಿಯಾಗಲಿ, ಸರ್ಕಾರಗಳ ದೊಡ್ಡ–ಸಣ್ಣ ಅಧಿಕಾರಿ–ನೌಕರರುಗಳಾಗಲಿ ಅಲ್ಲಿಂದ ಇಲ್ಲಿಗೆ ಬಂದು ಉದ್ದ – ಅಡ್ಡ ಬಿದ್ದು ಹೋಗುವವರೇ. ಹಾಗಾದ್ದರಿಂದ ಇವರ ಎಲ್ಲ ತರದ ಕೆಲಸಗಳೂ ಸಲೀಸು— ಮಠದವರ ಮನಸ್ಸಿಗೆ ಬರುವುದೊಂದೇ ತಡ. ಆದ್ದರಿಂದಲೇ ಇಂಥ ಕ್ಷೇತ್ರಗಳಲ್ಲಿ ಆಗಬಾರದ್ದೆಲ್ಲ ಆಗುವುದು, ಅದಕ್ಕೇನೂ

(4ನೇ ಪುಟಕ್ಕೆ)

ನ.ರಾ.ಪುರ ತಾಲ್ಲೂಕಿನ ಒಂದು ಸುಂದರ ಜಾತ್ರೆ

ನರಸಿಂಹರಾಜಪುರ: ಕನ್ನಡ ಸಾಹಿತ್ಯ ಪರಿಷತ್ತಿನ ಈ ತಾಲ್ಲೂಕಿನ ಪ್ರತಿನಿಧಿಯಾದ ರೈತ ಎಂ. ಬಿ. ಶ್ರೀನಿವಾಸಮೂರ್ತಿ ಸಾಹಿತ್ಯ ಪ್ರಿಯರಾಗಿರುವಂತೆಯೇ ಪರಿಸರ ಪ್ರೇಮಿಯೂ, ಗ್ರಾಮೀಣ ಮತ್ತು ಜನಪದಸಂಸ್ಕೃತಿಯ, ಅಭಿಮಾನಿಯೂ ಹೌದು. ಅವರೇ (ಹಾಗೂ ಅವರ ತಮ್ಮ ಜಯರಾಂ) ಪಾರುಪತ್ಯಗಾರರಾಗಿರುವ ಕೂಸಗಲ್ಲು ರಂಗನಾಥಸ್ವಾಮಿಯ ವಾರ್ಷಿಕ ಜಾತ್ರೆಯ ಸಮಯದಲ್ಲೂ ತಮ್ಮ ಈ ಸಾಮಾಜಿಕವಾದ ಕಳಕಳಿಗಳನ್ನು ಒಂದಿಲ್ಲೊಂದು ರೀತಿಯಲ್ಲಿ ಅವರು ಜನತೆಗೆ ಮುಟ್ಟಿಸಲು ಶ್ರಮಿಸುತ್ತಿರುತ್ತಾರೆ.

ಅದೇ ರೀತಿ ಈ ವರ್ಷದ ಜಾತ್ರೆಗೆ ಅವರು ಯೋಜಿಸಿದ್ದ ಕಾರ್ಯಕ್ರಮ "ಸಾಂಸ್ಕೃತಿಕ ಸಭೆ". ಇದರಲ್ಲಿ 'ದೇವಾಲಯಗಳು', 'ಗ್ರಾಮೀಣ ಸಂಸ್ಕೃತಿ', 'ಜಾನಪದ ಕಲೆಗಳು' ಇವುಗಳ ವಿಚಾರವಾಗಿ ಅರ್ಹರಿಂದ ಉಪನ್ಯಾಸಗಳನ್ನೂ ಜಾನಪದ ಹಾಡುಗಳನ್ನೂ ಏರ್ಪಡಿಸಿದ್ದರು.

ಆದರೆ ಭಾಷಣಕಾರ ಬಿ. ಆರ್. ಪ್ರಾಜೆಕ್ಟಿನ ಬಸವರಾಜ ನೆಲ್ಲಿಸರ ಹಾಗೂ ಹಾಡುಗಾರ ಕುಮಾರಚಲ್ಯ ಗೈರು ಹಾಜರಾದುದು ಒಂದೆಡೆಯಾದರೆ, ಆರಂಭದ ಭಾಷಣಕಾರರಲ್ಲಿ ಔಚಿತ್ಯ ಪ್ರಜ್ಞೆಯ ಹಾಗೂ ಸಮಾರಂಭದ ಸೌಂದರ್ಯ ಪ್ರಜ್ಞೆಯ ಅಭಾವದಿಂದಾಗಿ ಆರಂಭದಲ್ಲೇ ಮುಗ್ಗರಿಸಿದ ಕಾರ್ಯಕ್ರಮ ಅನಂತರ ಅದರ ಚಂದವನ್ನು ಪೂರ್ಣವಾಗಿ ಬಿಚ್ಚಿಕೊಳ್ಳುವಲ್ಲಿ ಸೋತಿತು. ಜೊತೆಗೆ ಇಂಥ ಸಂತೋಷ ಸಮಾರಂಭದಲ್ಲಿ ಶೋಕ ಗೀತೆಯೊಂದನ್ನು ಹಾಡಿದ್ದೂ ಅಷ್ಟೇನೂ 'ರುಚಿಕರ'ವಾಗಲಿಲ್ಲ.

ಒಟ್ಟಾರೆ ಕಾರ್ಯಕ್ರಮ ಒಂದು ಒಳ್ಳೆಯ ಮೇಲ್ಪಂಕ್ತಿಯಾಗಿತ್ತು. ವೈದ್ಯಾಧಿಕಾರಿ ಡಾ|| ಮಹದೇವಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ, ಈ ದುರ್ಗಮವಾದ, ಸಂಪರ್ಕ ರಹಿತವಾಗಿದ್ದ ಊರಿಗೆ ಒಂದು ಒಳ್ಳೆಯ ರಸ್ತೆ ಮಾಡಿಸಿಕೊಡಲು ಪ್ರಮುಖ ಕಾರಣರಾದ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಕೆ. ಪಿ. ಚಿನ್ನಪ್ಪ ಹೆಗ್ಡೆಯವರನ್ನು ಗ್ರಾಮಸ್ಥರು ಆತ್ಮೀಯವಾಗಿ ಶಾಲು ಹೊದಿಸಿ ಸನ್ಮಾನಿಸಿದರು. ಸಿರಿಮನೆ ನಾಗರಾಜ್ ಅತಿಥಿಯಾಗಿದ್ದರು

ಆಳೇಹಳ್ಳಿಯಿಂದ ಬರುವ ದೇವರನ್ನು 'ಎದುರುಗೊಳ್ಳುವುದು', ಅಪರಾತ್ರಿಯಲ್ಲಿ ಸಮೀಪದ ಗಿರಿ ಹತ್ತುವುದು (ಅಲ್ಲಿಂದ ಹುಣ್ಣಿಮೆಯ ಆ ರಾತ್ರಿಯಲ್ಲಿ ಭದ್ರಾ ಹಿನ್ನೀರಿನ ದೃಶ್ಯ ಸ್ವರ್ಗಸುಂದರವಾಗಿರುವುದಂತೆ)— ಇವು ಈ ಪುರಾತನ ದೇವಾಲಯದ ಜಾತ್ರೆಯ ಪ್ರಮುಖ ಆಕರ್ಷಣೆಗಳಾಗಿವೆ.

ಜನಸಾಮಾನ್ಯರೂ ಮಠ-ಮಾನ್ಯಗಳೂ

(3ನೇ ಪುಟದಿಂದ)
ಪ್ರಾಯಶ್ಚಿತ್ತವೂ ಆಗದೆ ಹೋಗುವುದು.

ಇಲ್ಲಿ ಕೂಡ ಹಿಂದೆ ಎಂಥೆಂಥವೋ ಕೇಸುಗಳು ಆಗಿ ಹೋಗಿವೆ. ಸರ್ಕಾರ ಏನೂ ಕ್ರಮ ತೆಗೆದುಕೊಳ್ಳಲಾರದೆ, 'ಕೇಸುಗಳೇ ಅಲ್ಲ'ವಾಗಿಸಿದೆ.

ಅದರಲ್ಲೂ ಶೃಂಗೇರಿ ತಾ॥ಗೆ ಬರುವ ತಾಲ್ಲೂಕು ಮಟ್ಟದ ಯಾವನೇ ಅಧಿಕಾರಿ ಬಂದವರೆ ಇವರ ಕಾಲು ಹಿಡಿಯಬೇಕು. ಕಾರಣ ಶೃಂಗೇರಿಯಲ್ಲಿ ಮಠದ ಮನೆಗಳನ್ನು ಬಿಟ್ಟರೆ ವಾಸಯೋಗ್ಯವಾದ ಬೇರೆ ಬಾಡಿಗೆ ಮನೆಗಳಿಲ್ಲದಿರುವುದು. ಹಾಗೆ ದಲಿತ ಬಿ. ಡಿ. ಒ. ಒಬ್ಬರಿಗೆ ಮಠದ ಮನೆ ಕೊಡಲಿಲ್ಲನಾದ ಕಾರಣ ಖಾಯಂ ಆಗಿ ಸರ್ಕಾರಿ ಕ್ವಾರ್ಟರ್ಸ್ ಕಟ್ಟಿಸಿ, ಮುಂದೆ ಬರುವವರಿಗೂ ಅನುಕೂಲವಾಗುವಂತೆ ಮಾಡಿದರು. ನಮ್ಮ ತಹಸೀಲ್ದಾರ್ ಪ್ರಭಾಕರ ಶರ್ಮ ಕೂಡ ಇದೇ ಹಂಗಿಗಾಗಿಯೇ ಈ ಸಂಬಂಧ ಒಲವು ತೋರಿಸುತ್ತಿರುವುದೆಂದು ತೋರುತ್ತದೆ.

ಸಹಕಾರ ?

ಮೊನ್ನೆ ಗುರುಗಳು ಹೇಳಿದರಲ್ಲ— ಆರೇಳು ವರ್ಷಗಳ ಹಿಂದೆ ಹೊಳೆಯಲ್ಲಿ ದೋಣಿ ಮುಳುಗಿ ಹಲವು ಜನ ಅಸುನೀಗಿದಾಗ ಯಾರೂ ಕೇಸು' ಮಾಡಲಿಲ್ಲ; ಮಾಡಿದ್ದರೆ ಬಹಳ ಕಷ್ಟವಾಗುತ್ತಿತ್ತು ಅಂತ. ಹಾಗೆ ಅವರು ಜನರ ಸಹಕಾರದ ಮಾತಾಡುವಾಗ ಮಠ ಕೂಡ ಜನರಿಗೆ ಸಹಕಾರಿಯಾಗಿರಬೇಡವ? ಕಡೇ ಪಕ್ಷ ಅಡ್ಡಿಯಾದರೂ ಆಗಬಾರದಲ್ಲ?

ಹೀಗೆ ಒಂದೊಂದು ಕಾರಣಕ್ಕೆ ಅಷ್ಟಷ್ಟು ಜನರನ್ನು, ಅಷ್ಟಷ್ಟು ಗ್ರಾಮಗಳನ್ನು ಹಿಂಸಿಸುವ, ಎದುರು ಹಾಕಿಕೊಳ್ಳುವ ಮಠವೊಂದು ಎಷ್ಟು ಕಾಲ ನಿಂತೀತು? ಅದೇನೋ ಕ್ರಮೇಣ ಅವಸಾನ ಹೊಂದಬಹುದು. ಆದರೆ ಆವರೆಗೆ ಈ ಉಪಟಳ— ಅಡೆ ತಡೆ ಅನುಭವಿಸಿ ಎಷ್ಟು ಜನ ಅನಾಯಕರು ತೊಂದರೆಪಡುತ್ತಾರೆ, ಎಷ್ಟು ಹಳ್ಳಿಗಳು ನಲುಗುತ್ತವೆ?

ಇದರಲ್ಲೆಲ್ಲ ಸಮಾಜದ, ಸಾರ್ವಜನಿಕರ ಹೊಣೆ ಏನೂ ಇಲ್ಲವೆ ? ಯಾರು ಇದನ್ನೆಲ್ಲ ಯೋಚಿಸಬೇಕು?

—ಕಲ್ಕುಳಿ ವಿಠಲ ಹೆಗ್ಡೆ.

(ಈ ವಿಚಾರದ ಮುಂದಿನ ಬೆಳವಣಿಗೆಗಳನ್ನು ಮುಂಬರುವ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ಅಂತೆಯೇ, ವಸ್ತುನಿಷ್ಠವಾದ ಪ್ರತಿಕ್ರಿಯೆಗಳಿಗೆ ಸ್ವಾಗತವಿದೆ. —ಸಂ.)

ಅಡಿಕೆ ಧಾರಣೆ

ಶಿವಮೊಗ್ಗ ತಾ॥ 19.2.1987

ಸರಕು :	2840 – 3660
ಬೆಟ್ಟೆ :	1701 – 2100
ಗೊರಬಲು :	716 – 1070

ಸಾಗರ

ತಾ॥ 13–2–87

ಇಡಿ ಅಡಿಕೆ ರೂ. 1860–2139 ಅಸಿ ರೂ. 2800–3361, ಚಾಲಿ ರೂ. 1506–1701, ಸಿಪ್ಪೆ ಗೋಟು ರೂ. 571–759

ವೇತನ ತಾರತಮ್ಯ : ದೈ. ಶಿ. ಶಿಕ್ಷಕರ ಪ್ರತಿಭಟನೆ

ರಾಜ್ಯದ ಮೂರನೇ ವೇತನ ಆಯೋಗವು ವರದಿ ಸಲ್ಲಿಸಿದ್ದು ಅದರಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ವೇತನದಲ್ಲಿನ ತಾರತಮ್ಯದ ಬಗ್ಗೆ ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘವು ತೀವ್ರವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಮುಖ್ಯಮಂತ್ರಿಗಳಿಗೆ ಕಳಿಸಿದೆ.

ಸಮಾನ ಅರ್ಹತೆ ಹಾಗೂ ಕೆಲಸಕ್ಕೆ ಸಮಾನ ವೇತನವೆಂಬ ತತ್ವವನ್ನು ಈ ಶಿಕ್ಷಕರ ವಿಷಯದಲ್ಲಿ ಆಯೋಗವು ಮೂಲೆಗುಂಪು ಮಾಡಿದೆ ಎಂದಿರುವ ಸಂಘವು ಜಿಲ್ಲೆ ಹಾಗೂ ವಿಭಾಗದಲ್ಲಿ ದೈಹಿಕ ಶಿಕ್ಷಣ ಅಧೀಕ್ಷಕರಾಗಿ ದುಡಿಯುತ್ತಿರುವವರಿಗೆ ವೇತನ ಶ್ರೇಣಿಯನ್ನು ಸೂಚಿಸದೇ ಇರುವ ಬಗ್ಗೆ ಖೇದ ವ್ಯಕ್ತಪಡಿಸಿ ಇದನ್ನು ಸರಿಪಡಿಸಿ ಕೊಡುವಂತೆ ವಿನಂತಿಸಿದೆ. ಹೊಸ ಶಿಕ್ಷಣ ನೀತಿಯಲ್ಲಿ ದೈಹಿಕ ಶಿಕ್ಷಣಕ್ಕೆ ಪ್ರಾಧಾನ್ಯ ಹೆಚ್ಚಿಸಿರುವ ಈ ಸಂದರ್ಭದಲ್ಲಿ ಈ ಶಿಕ್ಷಕರ ವೇತನವನ್ನು ಕೆಳಕ್ಕೆ ತಳ್ಳಿರುವುದು ಶೋಚನೀಯವೆಂದು ಸಂಘವು ವಿಷಾದಿಸಿದೆ.

ಚಿಕ್ಕಮಗಳೂರಲ್ಲಿ ಸಿ ಪಿ ಐ ರಾಜ್ಯ ಸಂಘಟನಾ ಸಮ್ಮೇಳನ

ಚಿಕ್ಕಮಗಳೂರು : ಭಾರತ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಮಟ್ಟದ ಸಂಘಟನಾ ಸಮ್ಮೇಳನವು ಏಪ್ರಿಲ್ 17 ರಿಂದ 3 ದಿನಗಳ ಕಾಲ ಇಲ್ಲಿ ನಡೆಯಲಿದೆ. ಪಕ್ಷದ ಸಂಘಟನಾ ವಿಚಾರಗಳ ಬಗ್ಗೆ ರಾಷ್ಟ್ರೀಯ ಸಂಘಟನಾ ಸಮ್ಮೇಳನ ನೀಡಿರುವ ನಿರ್ದೇಶನಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಂಘಟನೆಯನ್ನು ಬಲಿಷ್ಠಗೊಳಿಸುವ ಬಗ್ಗೆ ಈ ಸಮ್ಮೇಳನವು ಚರ್ಚಿಸಲಿದೆ.

ಸಮ್ಮೇಳನದಲ್ಲಿ ಪಕ್ಷದ ರಾಷ್ಟ್ರೀಯ ಮಂಡಳಿಯ ಕಾರ್ಯದರ್ಶಿಗಳೂ, ಮಧ್ಯಪ್ರದೇಶದ ಕಮ್ಯುನಿಸ್ಟ್ ನಾಯಕರೂ ಆದ ಹೋಮಿ ದಾಜಿಯವರು ಕಾರ್ಯಕಲಾಪಗಳಿಗೆ ಮಾರ್ಗದರ್ಶನ ನೀಡುವರು.

ಪಕ್ಷದ ನಾಲ್ವರು ಶಾಸಕರೂ ಸೇರಿದಂತೆ ರಾಜ್ಯದ ಸುಮಾರು 100 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುವರು.

ಶ್ರಮದಾನ

ಅಗಳಗಂಡಿ: ರಾಷ್ಟ್ರೀಯ ಸೇವಾ ಯೋಜನೆ ಶಿಬಿರದ ಅಂಗವಾಗಿ ಶೃಂಗೇರಿಯ ಜೆ. ಸಿ. ಬಿ. ಎಂ. ಕಾಲೇಜಿನ ವಿದ್ಯಾರ್ಥಿಗಳು ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರಮದಾನ ನಡೆಸಿ, ಆಟದ ಮೈದಾನ ನಿರ್ಮಿಸಿದರು.

ಪೋಸ್ಟ್‌ಮಾಸ್ಟರ್ ಮೇಲೆ ಹಲ್ಲೆ

ಇತ್ತೀಚಿನ ಚುನಾವಣೆ ಹಿನ್ನೆಲೆಯಲ್ಲಿ ಇಲ್ಲಿನ ಪೋಸ್ಟ್‌ಮಾಸ್ಟರ್ ಮೇಲೆ ಹಲ್ಲೆ ನಡೆಯಿತೆನ್ನಲಾಗಿದ್ದು, ಬಾಳೆಹೊನ್ನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಅವರೀಗ ಗುಣಮುಖರಾಗಿದ್ದಾರೆ.

(ವರದಿ: **ಎಂ.ವಿ. ಗಂಗಾಧರ್**)

ಸಹಕಾರ ಸಂಘಕ್ಕಿಂತ ಕಾರ್ಯದರ್ಶಿಯ ಹಿತ ಮುಖ್ಯವೇ ?

(ಒಂದನೆಯ ಪುಟದಿಂದ)
ಸೆಕ್ಷನ್ 64ರ ರೀತ್ಯಾ ವಿಚಾರಣೆಗೆ ಶಿಫಾರ್ಸು ಮಾಡಲಾಯಿತು. (ವಿಚಾರಣೆಯೇನೋ ನಡೆದಿದೆ. ಆದರೆ ಈವರೆಗೂ ಅದರ ವರದಿ ಬಂದಿಲ್ಲ.)

ಈ ನಡುವೆ ಸಹಕಾರ ಇಲಾಖೆ ಹಿರಿಯ ಅಧಿಕಾರಿ ಅವನನ್ನು ಸಮರ್ಥಿಸಹೋಗಿ ಗ್ರಾಹಕರಿಂದ ಛೀಮಾರಿ ಮಾಡಿಸಿಕೊಂಡಿದ್ದು, ಊರಿನ ಘಾಟಿ 'ಮುಖಂಡ'ನೊಬ್ಬ ದಿಢೀರನೆ ತನಗೊಬ್ಬನಿಗೇ ಸಾಲ ಮಂಜೂರು ಮಾಡಿಸಿಕೊಂಡು ಸದಸ್ಯರಿಂದ ಘೇರಾವ್‌ಗೆ ಒಳಗಾದದ್ದು, ಇತ್ಯಾದಿ ಇತ್ಯಾದಿ ವಿಚಾರಗಳನ್ನು ಕಾಲಕಾಲಕ್ಕೆ 'ಮುಂಜಾವು' ಪ್ರಕಟಿಸಿದ್ದನ್ನು ಇಲ್ಲಿ ಜ್ಞಾಪಿಸಬಹುದು.

ಅಂತೂ ಕುಂಟುತ್ತಾ ಕುಂಟುತ್ತಾ ಈಗ ಸಂಘಕ್ಕೆ ಸಿಕ್ಕಿರುವ ಆಡಿಟ್ ಆಕ್ಷೇಪಣೆಯಂತೆ ಹಣ ದುರುಪಯೋಗ ಆಗಿರುವುದರ ಮೊತ್ತ ಎಷ್ಟೆಂಬುದು ಗೊತ್ತಾಗಿದೆ— 1984–85ಕ್ಕೆ ರೂ. 19,444–40, 85–86ಕ್ಕೆ 6741 ರೂ. ಹಾಗೂ ಸೆಕ್ಷನ್ 64ರಂತೆ ಸುಮಾರು 25,000 ರೂ.— ಹೀಗೆ ಒಟ್ಟು ಸುಮಾರು 50 ಸಾವಿರ ರೂಪಾಯಿಗೂ ಹೆಚ್ಚು ಹಣ ಮುಳುಗಡೆಯಾಗಿರುವುದಾಗಿ ಗೊತ್ತಾಗಿದೆ.

ಈ ಬಗ್ಗೆ ಸಂಘದಿಂದ ಟಿ. ಎಲ್. ಶ್ರೀನಿವಾಸನಿಗೆ ಕೊಟ್ಟ ನೋಟೀಸಿಗೆ ಪ್ರತಿಕ್ರಿಯೆ ಇಲ್ಲ. ಇತ್ತ ಸಂಘದ ಮಾಜಿ ಅಧ್ಯಕ್ಷರು 1000 ರೂ.ಗಳನ್ನು 'ಅಡ್ವಾನ್ಸ್' ಪಡೆದು ಪುನಃ ಕಟ್ಟದ ಬಗ್ಗೆ ಅವರಿಗೂ ನೋಟೀಸ್ ಕೊಟ್ಟದ್ದು, ಅದಕ್ಕೂ ಪ್ರತಿಕ್ರಿಯೆ ಡಿಟ್ಟೋ. ಸಂಘದ ಈ ಎಲ್ಲ ವ್ಯವಹಾರಗಳ ಬಗ್ಗೆ ಇಲಾಖೆ ತಪ್ಪಿತಸ್ಥರ ವಿರುದ್ಧ ಶೀಘ್ರವಾಗಿ ಕಾನೂನು ಕ್ರಮ ಜರುಗಿಸಲು ಕೇಳಿದ್ದಕ್ಕೂ ಪ್ರತಿಕ್ರಿಯೆ ಡಿಟ್ಟೋ.

ಹೀಗೆ ಜಿಲ್ಲಾ ಕೇಂದ್ರ ಸಹ॥ ಬ್ಯಾಂಕಿನವರಾಗಲೀ ಸಹಕಾರ ಇಲಾಖೆಯಾಗಲೀ ಈ ಟಿ.ಎಲ್. ಶ್ರೀನಿವಾಸನ ಮೇಲೆ ಕ್ರಮ ಜರುಗಿಸದಿರುವುದನ್ನು ನೋಡಿದರೆ, ಮೇಲೆ ಹೇಳಿದಂತೆ ಸಂಘಕ್ಕಿಂತ ಈ 'ಮುಳುಗಡೆ ಕಾರ್ಯದರ್ಶಿ'ಯ ಹಿತವೇ ಹೆಚ್ಚೆಂದು ಕಂಡು ಬರುತ್ತದೆ ಎನ್ನುತ್ತಾರೆ ಹಾಲಿ ಅಧ್ಯಕ್ಷ.

ಈ ಬಗ್ಗೆ ಶಾಸಕರಿಗೆ ಕೂಡ ಪದೇ ಪದೇ ತಿಳಿಸಿಯೂ ಏನೂ ಪ್ರಯೋಜನವಾಗದಿದ್ದ ಬಗ್ಗೆ ಬಹಳ ವಿಷಾದಪಟ್ಟಿರುವ ಸತೀಶ್, ಇದೇನು ಅವರದೂ ಈ 'ಬಡಪಾಯಿ'ಗೇ ಬೆಂಬಲವೋ ಅಥವಾ ಅವರ 'ಕಾರ್ಯವೈಖರಿ'ಯೇ ಹೀಗೋ! ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಕಿಗ್ಗದಲ್ಲಿ ಉಚಿತ ಕಾನೂನು ನೆರವು ಶಿಬಿರ

ಶೃಂಗೇರಿ: ನ. ರಾ. ಪುರದ ಉಚಿತ ಕಾನೂನು ನೆರವು ಸಮಿತಿಯ ಆಶ್ರಯದಲ್ಲಿ ಕಿಗ್ಗದಲ್ಲಿ ಫೆ. 15ರಂದು ಉಚಿತ ಕಾನೂನು ನೆರವು ಶಿಬಿರ ನಡೆಯಿತು. ವಕೀಲ ಸೀತೂರು ಚಂದ್ರಶೇಖರರಾವ್ ಅಧ್ಯಕ್ಷತೆ ವಹಿಸಿದ್ದರು.

ಶಿಬಿರವನ್ನು ಉದ್ಘಾಟಿಸಿದ ವಕೀಲರಾದ ಶಶಿಕಲಾ ಉರಣ್‌ಕರ್ ಶಿಬಿರಕ್ಕೆ ಸುತ್ತಮುತ್ತಲ ಗ್ರಾಮಗಳಿಂದ ಬಂದಿದ್ದ ಜನರಿಗೆ ಶಿಬಿರದ ಉದ್ದೇಶವನ್ನು, ಕಾನೂನು ಮತ್ತು ನ್ಯಾಯಾಲಯದ ಬಗೆಗಿನ ತಿಳುವಳಿಕೆಯನ್ನೂ ಮನಮುಟ್ಟುವಂತೆ ವಿವರಿಸಿದರು. ಇನ್ನೊಬ್ಬ ವಕೀಲರಾದ ಎಚ್. ಕೃಷ್ಣಮೂರ್ತಿ ಅವರು ಸಹ ಕಾನೂನು ಸಲಹೆ ನೀಡಿದರು.

ಸಮಿತಿಯ ಕಾರ್ಯದರ್ಶಿ ಪಿ. ಆರ್. ಶ್ರೀನಿವಾಸಮೂರ್ತಿ ಸ್ವಾಗತಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಶಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.